ಟಾಸ್ಕ್‌ಫೋರ್ಸ್‌ನಡಿ ಅನುಷ್ಠಾನಗೊಳಿಸಿದ ಅನುಮೋದಿತ ಕಾಮಗಾರಿಗಳ ಬಿಲ್ಲು ಪಾವತಿಸಲು ಪಂಚಾಯತ್ ರಾಜ್ ಸಂಸ್ಥೆಗಳು ಕ್ರಮವಹಿಸುತ್ತವೆ. ಇದಲ್ಲದೆ ಸಾಮಾನ್ಯ ಕಾರ್ಯಕ್ರಮಗಳಡಿ ಗ್ರಾಮ ಪಂಚಾಯತಿಗಳ ಪ್ರಸ್ತಾವನೆಗಳನ್ನು ಚಾಲ್ತಿಯಲ್ಲಿರುವ ಚಟುವಟಿಕೆ ನಕ್ಷೆ ಹಾಗೂ ಆಯಾ ಯೋಜನಾ ಮಾರ್ಗದರ್ಶಿಗಳ ಪ್ರಕಾರ ತಾಲ್ಲೂಕು ಪಂಚಾಯತಿ ಪರಿಶೀಲಿಸಿ, ಅನುದಾನ ಲಭ್ಯತೆ ಆಧರಿಸಿ, ಅನುಮೋದನೆ ನೀಡಲು ಜಿಲ್ಲಾ ಪಂಚಾಯತಿಗೆ ಪ್ರಸ್ತಾವನೆ ಸಲ್ಲಿಸುತ್ತದೆ. ಇವುಗಳಲ್ಲಿ ಶಾಸಕರ ಮನವಿ / ಶಿಫಾರಸ್‌ಗಳನ್ನು ಸಹ ಆಯಾ ಯೋಜನಾ ಮಾರ್ಗದರ್ಶಿಗಳ ಪ್ರಕಾರ ಅಳವಡಿಸಲಾಗುತ್ತದೆ.

127 (268) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯದಲ್ಲಿ ಕೃಷಿಕರಿಗೆ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸಲು ವಾರ್ಷಿಕ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ಹಾಗಿದ್ದಲ್ಲಿ, ಬೀಜಗಳನ್ನು ಒದಗಿಸುವಾಗ ಯಾವ ಯಾವ ಬೆಳೆಗಳಿಗೆ ಸಬ್ಸಿಡಿಯನ್ನು ಒದಗಿಸಲಾಗುವುದು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು):

ಅ) 2006–07ನೇ ಸಾಲಿನಲ್ಲಿ ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇಕಡಾ 75ರ ರಿಯಾಯಿತಿ ದರದಲ್ಲಿ ವಿತರಿಸಲು ಇಲ್ಲಿಯವರೆಗೆ 87.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದ್ದು ಉಳಿದ ಅನುದಾನ ಬಿಡುಗಡೆ ವಿಷಯವು ಪರಿಶೀಲನೆಯಲ್ಲಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮುಂಗಾರು ಹಂಗಾಮಿನಲ್ಲಿ ಬೆಳೆಗಳಾದ ಭತ್ತ, ರಾಗಿ, ಜೋಳ, ಸಜ್ಜೆ, ಮುಸುಕಿನಜೋಳ, ತೊಗರಿ, ಹೆಸರು, ಉದ್ದು, ಅಲಸಂದೆ, ಶೇಂಗಾ, ಸೂರ್ಯಕಾಂತಿ, ಸೋಯ ಅವರೆ ಹಾಗೂ ಹತ್ತಿ ಬೆಳೆಗಳ ಬಿತ್ತನೆ ಬೀಜಕ್ಕೆ ಮತ್ತು ಹಿಂಗಾರು ಹಂಗಾಮಿನಲ್ಲಿ ಹಿಂಗಾರಿ ಜೋಳ, ಗೋಧಿ, ಕಡಲೆ, ಸೂರ್ಯಕಾಂತಿ ಮತ್ತು ಕುಸುಬೆ ಬೆಳೆಗಳ ಬಿತ್ತನೆ ಬೀಜಕ್ಕೆ ಶೇಕಡ 75 ರಷ್ಟು ನೀಡಲಾಗಿರುತ್ತದೆ.

ಅನುಬಂಧ

2006–07ರ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣಾ ಪ್ರಗತಿ

(ಭೌತಿಕ – ಕ್ವಿಂಟಾಲುಗಳಲ್ಲಿ : ಆರ್ಥಿಕ – ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಮುಂಗಾರು		ಹಿಂಗಾರು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬಾಗಲಕೋಟೆ	6175.65	30605442	4299.10	8758576
2	ಬೆಂಗಳೂರು (ಗ್ರಾ)	5316.42	6230951	0.00	0
3	ಬೆಂಗಳೂರು ನಗರ	912.85	1203013	0.00	0
4	ಬೆಳಗಾಂ	34075.76	74979801	5700.54	9762659
5	ಬಳ್ಳಾರಿ	17116.95	43388013	3548.56	6965589
6	ಬೀದರ್	18945.81	45836570	4301.70	6797281
7	ಬಿಜಾಪುರ	6033.87	45799412	8777.42	13427807
8	ಚಾಮರಾಜನಗರ	14905.71	23099894	285.00	269664
9	ಚಿಕ್ಕಮಗಳೂರು	4904.26	16998546	406.93	605049
10	ಚಿತ್ರದುರ್ಗ	13334.66	28406475	2132.49	3721799
11	ದಕ್ಷಿಣ ಕನ್ನಡ	295.05	292205	0.00	0
12	ದಾವಣಗೆರೆ	22174.48	65457050	339.08	1389465
13	ಧಾರವಾಡ	9855.99	28730830	4267.12	6744354
14	ಗದಗ್	5172.28	20199298	5757.13	12661140
15	ಗುಲ್ಬರ್ಗಾ	11647.65	63275770	8031.03	13099042
16	ಹಾಸನ	11439.27	25821471	375.57	545501
17	ಹಾವೇರಿ	24441.58	58524378	756.62	1267546
18	ಕೊಡಗು	1901.79	2689801	0.00	0
19	ಕೋಲಾರ	16875.31	20112511	27.58	345050
20	ಕೊಪ್ಪಳ	8965.75	36212547	2425.83	4153081
21	ಮಂಡ್ಯ	28044.08	25748260	0.00	0

ಕ್ರ. ಸಂ.	ಜಿಲ್ಲೆ	ಮುಂಗಾರು		ಹಿಂಗಾರು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
22	ಮೈಸೂರು	25331.87	62771273	179.87	237911
23	ರಾಯಚೂರು	12060.23	54054283	6554.30	13736873
24	ಶಿವಮೊಗ್ಗ	24721.00	41243459	0.00	0
25	ತುಮಕೂರು	41042.37	40991649	51.75	67275
26	ಉಡುಪಿ	1788.71	1787572	0.00	0
27	ಉತ್ತರ ಕನ್ನಡ	5604.27	14439858	0.00	0
	ಮಹಾಮೊತ್ತ	373083.59	878900332	58216.62	104575662

ಕ್ರ. ಸಂ.	ಜಿಲ್ಲೆ	ಒಟ್ಟು	
		ಭೌತಿಕ	ಆರ್ಥಿಕ
1	ಬಾಗಲಕೋಟೆ	10474.75	39364018
2	ಬೆಂಗಳೂರು (ಗ್ರಾ)	5316.42	6230951
3	ಬೆಂಗಳೂರು ನಗರ	912.85	1203013
4	ಬೆಳಗಾಂ	39776.30	84742460
5	ಬಳ್ಳಾರಿ	20665.51	50373602
6	ಬೀದರ್	23247.51	52633851
7	ಬಿಜಾಪುರ	14811.29	59227219
8	ಚಾಮರಾಜನಗರ	15190.71	23369558
9	ಚಿಕ್ಕಮಗಳೂರು	5310.19	17603595
10	ಚಿತ್ರದುರ್ಗ	15467.15	32128274
11	ದಕ್ಷಿಣ ಕನ್ನಡ	295.05	292205
12	ದಾವಣಗೆರೆ	22513.56	66846515
13	ಧಾರವಾಡ	14123.11	35475184
14	ಗದಗ್	10929.41	32860438
15	ಗುಲ್ಬರ್ಗಾ	19678.68	76374812
16	ಹಾಸನ	11814.84	26366972
17	ಹಾವೇರಿ	25198.20	59791924

ಕ್ರ. ಸಂ.	ಜಿಲ್ಲೆ	ಒಟ್ಟು	
		ಭೌತಿಕ	ಆರ್ಥಿಕ
18	ಕೊಡಗು	1901.79	2689801
19	ಕೋಲಾರ	16902.89	20457561
20	ಕೊಪ್ಪಳ	11391.58	40365628
21	ಮಂಡ್ಯ	28044.08	25748260
22	ಮೈಸೂರು	25511.74	63009184
23	ರಾಯಚೂರು	18614.53	67791156
24	ಶಿವಮೊಗ್ಗ	24721.00	41243459
25	ತುಮಕೂರು	41094.12	41058924
26	ಉಡುಪಿ	1766.71	1767572
27	ಉತ್ತರ ಕನ್ನಡ	5604.27	14439858
ಮಹಾಮೊತ್ತ		431300.19	983475574

128 (259) ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) : ಮಾನ್ಯ ಆಹಾರ ಹಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಹಳದಿ ಪಡಿತರ ಚೀಟಿಯನ್ನು ವಿತರಿಸಲು ಇಲಾಖೆಯಲ್ಲಿ ಗೊಂದಲವಿರುವುದು ನಿಜವೇ ;

ಆ) ರಾಜ್ಯದಲ್ಲಿ ಹಳದಿ ಪಡಿತರ ಚೀಟಿಗಳ ಗರಿಷ್ಟ ಪ್ರಮಾಣವೆಷ್ಟು ಹಾಗೂ ಆ ಪೈಕಿ ವಿತರಿಸಲಾಗುವುದೆಷ್ಟು ;

ಇ) ವಿತರಿಸಲು ಕಾಲಾವಧಿ ನಿಗಧಿಪಡಿಸಲಾಗಿದೆ ?

ಶ್ರೀ ಗೋವಿಂದಪ್ಪ ಎಂ. ಕಾರಜೋಳ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ಇಲ್ಲ

ಆ) ರಾಜ್ಯದಲ್ಲಿ ಹಳದಿ ಪಡಿತರ ಚೀಟಿಗಳಿಗೆ ಗರಿಷ್ಟ ಪ್ರಮಾಣ ನಿಗದಿ ಮಾಡಿರುವುದಿಲ್ಲ. ರಾಜ್ಯದಾದ್ಯಂತ ವಿತರಿಸಲಾದ ವರ್ಗವಾರು ತಾತ್ಕಾಲಿಕ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ.